# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ಧನಂಜಯ ಸರ್ಜಿ ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-

**ವಿಷಯ:** "ದಾನ ಕೊಟ್ಟ ರಕ್ತದಲ್ಲಿ ಹೆಚ್.ಐ.ವಿ ಪರೀಕ್ಷೆ ವೇಳೆ ಹೆಪಟೈಟಿಸ್, ಮಲೇರಿಯಾದಂತಹ ಗಂಭೀರ ಸೋಂಕು ದೃಢ" ವಿಜಯವಾಣಿ ದಿನ ಪತ್ರಿಕಾ ವರದಿ ಕುರಿತು.

**ಹೇಳಿಕೆ:-**

ರಾಷ್ಟ್ರೀಯ ರಕ್ತ ಚಾಲನಾ ಪರಿಷತ್ ಮತ್ತು ಔಷಧ ನಿಯಂತ್ರಣ ಕಾಯ್ದೆ ನಿಯಮಾವಳಿಯಂತೆ ಒಟ್ಟು ರಕ್ತ ಸಂಗ್ರಹಣೆಯಲ್ಲಿ ಶೇಕಡ 2% ರಿಂದ 3% ರಕ್ತವು ಸೋಂಕಿನಿಂದ ಕೂಡಿರುವುದಾಗಿ ತಿಳಿಸಿ ವಿಶ್ವ ಸಂಸ್ಥೆಯ ಜಾಗತಿಕ ಮಟ್ಟದ ಹಲವು ಸಮೀಕ್ಷೆಗಳಿಂದ ದೃಡೀಕರಿಸಿರುತ್ತಾರೆ. ಆದ್ದರಿಂದ ಒಟ್ಟು ಸಂಗ್ರಹಣೆಯಲ್ಲಿ ಸರಾಸರಿ ಆಧಾರದಂತೆ ಶೇಕಡ 2% ಕಡಿಮೆ ಸೋಂಕು, ಹಾಗೂ ಒಟ್ಟು ಸಂಗ್ರಹಣೆಯಲ್ಲಿ ಗರಿಷ್ಠ ಶೇಕಡ 5% ರಕ್ತವು ತ್ಯಾಜ್ಯ ರಕ್ತವಾಗಿರುವುದು ಹಲವು ಸಮೀಕ್ಷೆಗಳಲ್ಲಿ ಕಂಡು ಬಂದಿದೆ.

ಕರ್ನಾಟಕ ರಾಜ್ಯದ ಕಳೆದ 3 ವರ್ಷಗಳ ರಕ್ತ ಸೊಂಕು ಮತ್ತು ರಕ್ತ ತ್ಯಾಜ್ಯಗಳ ವಿವರ ಈ ಕೆಳಕಂಡಂತಿದೆ.

Statement showing last 3 years discard & Transfusion Transmitted Infection (TTI) Reactive rate of Blood units in Karnataka

| Year | No of Blood Units Collection | Discard | % of Discard | Sero Reactive (HIV, HBC,HCV,VDRL, MP) | | Reason of Discard |
|---|---|---|---|---|---|---|
| | | | | Detected | % of TTI | |
| 2024-25 | 1011073 | 42919 | 4.24 | 8,989 | 0.89 | Sero Reactive<br>out dated & any other reason |
| 2023-24 | 974689 | 37906 | 3.89 | 7,698 | 0.79 | |
| 2022-23 | 975785 | 43857 | 4.49 | 8,240 | 0.84 | |

ರಕ್ತ ತ್ಯಾಜ್ಯವನ್ನು ಹಾಗೂ ಸೋಂಕಿತ ರಕ್ತವನ್ನು ಸಂಗ್ರಹಿಸುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ರಕ್ತ ತ್ಯಾಜ್ಯ ಮತ್ತು ಸೋಂಕಿತ ರಕ್ತದಾನ ಮಾಡುವುದನ್ನು ತಡೆಗಟ್ಟಲು IEC ಕಾರ್ಯಕ್ರಮಗಳ ಮುಖಾಂತರ ರಕ್ತ ಕೇಂದ್ರಗಳಿಗೆ ಹಾಗೂ ದಾನಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ.

- ರಕ್ತದಾನ ಮಾಡಲು ಬಂಧಂತಹ ದಾನಿಗೆ ಮೊದಲೇ ಸೋಂಕು ಹರಡುವ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವುದು ಇದರಿಂದ ದಾನಿಯು ತಾನು ರಕ್ತ ಕೊಡಬಹುದೇ ಅಥವಾ ಬೇಡವೇ ಎಂಬ ದೃಢ

ನಿರ್ಧಾರಕ್ಕೆ ಬರುವಂತೆ ಆಪ್ತ ಸಮಾಲೋಚನೆ ನಡೆಸುವುದು.

- ಮತ್ತು ಎಲ್ಲಾ ರಕ್ತಕೇಂದ್ರಗಳಿಗು ಬೇಡಿಕೆಗನುಗುಣವಾಗಿ ಅವಶ್ಯವಿರುವ ರಕ್ತವನ್ನು ಮಾತ್ರವೇ ಪಡೆಯಲು ಹಾಗೂ ಸಂಗ್ರಹಿಸಲು ಸೂಚಿಸಿದೆ. ಹೆಚ್ಚುವರಿ ರಕ್ತವನ್ನು ಅಗತ್ಯ ರಕ್ತ ಕೇಂದ್ರಗಳು/ಆಸ್ಪತ್ರೆಗಳಿಗೆ ರವಾನಿಸಲು ಸೂಚಿಸಿದೆ.

ಈ ಮೇಲಿನ ಎಲ್ಲಾ ಕ್ರಮಗಳಿಂದ ರಕ್ತ ತ್ಯಾಜ್ಯ ಮತ್ತು ರಕ್ತ ಸೋಂಕುಗಳು ವಿಶ್ವ ಸಂಸ್ಥೆ ಹಾಗೂ ರಾಷ್ಟ್ರೀಯ ರಕ್ತಚಾಲನಾ ಪರಿಷತ್ ನಿಗದಿ ಪಡಿಸಿದ ಗರಿಷ್ಠ ಮಟ್ಟಕ್ಕಿಂತ ಕಡಿಮೆ ಸಾಧಿಸಲು ಪ್ರಯತ್ನಿಸಲಾಗಿದೆ. ಮುಂದೆ ಇನ್ನೂ ಹೆಚ್ಚಿನ ಪ್ರಮಾಣದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುಖಾಂತರ ಸೋಂಕಿನ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ಕಡತ ಸಂಖ್ಯೆ:** ಆಕುಕ 130 ಎಸ್‌ಬಿವಿ 2025.

(ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು